2-30 P.M.

(iv) ವಿಶ್ವ ಬ್ಯಾಂಕಿನ ನೆರವಿನೊಂದಿಗೆ ಧರ್ಮ ಪ್ರಾಜೆಕ್ಟ್‌ನ್ನು ರೀ-ಮಾಡಲಿಂಗ್ ಮಾಡುವುದು

ಶ್ರೀ ಸಿ. ಎಂ. ಉದಾಸಿ.- (ಹಾನಗಲ್) ಮಾನ್ಯ ಅಧ್ಯಕ್ಷರೇ, ವಿಶ್ವಬ್ಯಾಂಕಿನ ನೆರವಿನೊಂದಿಗೆ ಧರ್ಮ ಪ್ರೊಜೆಕ್ಟ್ ರೀ ಮಾಡ್ಲಿಂಗ್ ತೆಗೆದುಕೊಳ್ಳಲು ಸರಕಾರದಲ್ಲಿ ಪರಿಶೀಲನೆ ಇದ್ದದ್ದು, ಈವರೆಗೂ ಕಾರ್ಯಗತವಾಗದೇ ಇರುವುದರಿಂದ ನೀರಾವರಿಯ ಯೋಜನೆ ಪೂರ್ಣ ಪ್ರಮಾಣದಲ್ಲಿ ರೈತರಿಗೆ ಸಿಕ್ಕಿಲ್ಲ ವೆನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಇದರ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಸಚಿವರು).—ಮಾನ್ಯ ಅಧ್ಯಕ್ಷರೇ ಇದನ್ನು ಮಾನ್ಯ ಲೋಕೋಪಯೋಗಿ ಮಂತ್ರಿಗಳ ಗಮನಕ್ಕೆ ತಂದು ಉತ್ತರವನ್ನು ದೊರಕಿಸಿಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೇನೆ.

(v) ತಾಲ್ಲೂಕು ರಸ್ತೆಗಳಮೇಲೆ ರೈತರು ತಮ್ಮ ದವಸಧಾನ್ಯಗಳನ್ನು ಹಾಕಿಕೊಂಡು ಪ್ರಾಯಾಣಕ್ಕೆ ತೊಂದರೆ ಕೊಡುತ್ತಿರುವುದು.

ಶ್ರೀ ಜಿ. ರಾಜೂಗೌಡ.—ಮಾನ್ಯ ಅಧ್ಯಕ್ಷರೇ, ರಾಜ್ಯದ ಎಲ್ಲಾ ತಾಲ್ಲೂಕುಗಳ ಎಲ್ಲಾ ಹಳ್ಳಿಗಳ ಮೂಲಕ ಹಾದು ಹೋಗುವ ಲೋಕೋಪಯೋಗಿ ರಸ್ತೆಗಳ ಮೇಲೆ ಅಧಿಕವಾದ ವಾಹನಗಳ ಸಂಚಾರ ವಿದ್ದಾಗ್ಯೂ, ರೈತರುಗಳು ತಾವು ಬೆಳೆದ ಎಲ್ಲಾ ವಿಧವಾದ ತೆನೆಗಳ ರಾಶಿಯನ್ನು ರಸ್ತೆಗಳ ಮೇಲೆ ಎತ್ತರವಾಗಿ ಹಾಕಿ, ವಾಹನಗಳ ಸಂಚಾರಕ್ಕೆ ಅಡ್ಡಿ ಪಡಿಸುತ್ತಿರುವುದರಿಂದಲೂ ರಸ್ತೆಗಳ ಒಡಿಯಲ್ಲಿ ಧಾನ್ಯಗಳ ಹೊಟ್ಟನ್ನು ತೂರಿ ಪ್ರಯಾಣಿಕರ ಮೈಬೇಟೆಲ್ಲಾ ಧೂಳು ತುಂಬುವಂತೆ ಮಾಡುತ್ತಿರುವುದರಿಂದಲೂ, ಈ ಅಸಹ್ಯ ಕೆಲಸವನ್ನು ಎಲ್ಲಾ ಇಲಾಖೆಯ ಎಲ್ಲಾ ದರ್ಜೆಯ ಅಧಿಕಾರಿಗಳು ನೋಡಿಕೊಂಡು ಅಸಹಾಯಕರಾಗಿ ವರ್ತಿಸುತ್ತಿದ್ದಾರೆ. ಇದರಿಂದ ಪ್ರಯಾಣಿಕರಿಗೆ ಆಗುವ ತೊಂದರೆಯ ತೀವ್ರತೆಯನ್ನು ಮಾನ್ಯ ಲೋಕೋಪಯೋಗಿ ಹಾಗೂ ಕಾಮಗಾರಿಗಳ ಸಚಿವರು ಮನಗಂಡು ಇನ್ನು ಮುಂದೆ ಇದು ಎಲ್ಲಿಯೂ ನಡೆಯದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಸಚಿವರು).—ಮಾನ್ಯ ಅಧ್ಯಕ್ಷರೇ, ಇದನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಹೇಳುತ್ತೇನೆ.

ಶ್ರೀ ಪಟವಂಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಅಧ್ಯಕ್ಷರು.—ರೂಲ್ಸ್ ಪ್ರಕಾರ ಸದನದ ಗಮನಕ್ಕೆ ತರಬೇಕು, ಆ ಮೇಲೆ ಮಂತ್ರಿಗಳು ಉತ್ತರ ಕೊಡುತ್ತಾರೆ, ಇಲ್ಲವೇ ಅವರ ಪರವಾಗಿ ಬೇರೆ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಏಕೆ ತರಬೇಕು, ಅವರು ಇರುತ್ತಾರೆಂದು ಓದಬಹುದು. ಬರೀ ಗಮನಕ್ಕೆ ತರುವುದಾದರೆ ನಾವೂ, ನೀವೂ ಸಾಕು. ಇವೊತ್ತು ಕೊನೆಯ ದಿವಸ, ಇಲ್ಲಿ ಒಬ್ಬ ಮಂತ್ರಿಗಳೂ ಇಲ್ಲ. ನಾವು ಯಾರನ್ನು ಕೇಳಬೇಕು ?

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಎರಡು ಕಡೆಯವರು ಸರಿಯಾಗಿ ಹೋಗಿ ಎಂದರೆ ಕಡೆಯ ದಿವಸ ಜಗಳ ತೆಗೆಯುತ್ತಿದ್ದೀರಿ. ಇಲ್ಲಿಯವರೆಗೂ ನೀವೂ, ಅವರು ಸರಿಯಾಗಿ ಹೋಗಿದ್ದೀರಿ, ಈಗ ಸರಿಯಾಗಿ ಹೋಗಿ ಎಂದು ಹೇಳಿದರೆ, ಕಾಲು ಕೆರೆದು ಜಗಳ ತೆಗೆಯುತ್ತೀರಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಮಗೇ ಗೊತ್ತಿದೆ ನಾವು ಏನೋ ಮಹತ್ವದ ಪ್ರಶ್ನೆಹಾಕುತ್ತೇವೆ ಕೆಲಸ ಆಗಬೇಕೆಂಬ ದೃಷ್ಟಿಯಿಂದ, ನ್ಯಾಯ ಸಿಗಬೇಕು, ಶಾಂತಿಯಾಗಬೇಕೆಂದು ಕೇಳುತ್ತೇವೆ. ಇಲ್ಲಿ ಉತ್ತರ ಹೇಳುವವರು ಇಲ್ಲ.

ಅಧ್ಯಕ್ಷರು.—ನ್ಯಾಯ ಒದಗಿಸಿಕೊಡುತ್ತೇನೆ, ತಾವು ಕುಳಿತುಕೊಳ್ಳಿ. ತಾವೂ ಕೂಡ ಮಂತ್ರಿಯಾಗಿ ಕೆಲಸ ಮಾಡಿದ್ದೀರಿ, ಆಗ ನಿಮ್ಮ ಪರವಾಗಿ ಮತ್ತೊಬ್ಬ ಮಂತ್ರಿಗಳು ಉತ್ತರ ಹೇಳುತ್ತಿರಲಿಲ್ಲವೇ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಏನೋ ಮಹತ್ವದ ಕೆಲಸವಿದ್ದು ಹೋಗಿದ್ದರೆ ಸರಿ, ಒಂಭತ್ತು ಮಂತ್ರಿಗಳೂ ಹೋಗಿದ್ದಾರೆ. ಬೇಕಾದರೆ ಲಿಸ್ಟ್ ಕೊಡುತ್ತೇನೆ. ಇವತ್ತು ಕೊನೆಯ ದಿವಸ ಅವರದ್ದು ಜವಾಬ್ದಾರಿಯಿಲ್ಲವೇ ? ಈ ಮನೆ ಅವರದ್ದೂ ಜವಾಬ್ದಾರಿಯಿಲ್ಲವೇ ? ಮಾನ್ಯ ಸದಸ್ಯರುಗಳು ಕೇಳಿದಂತಹ ಪ್ರಶ್ನೆಗಳಿಗೆ ಉತ್ತರ ಒದಗಿಸುವುದು ಅವರ ಕರ್ತವ್ಯವಲ್ಲವೇ ? ಆರೇಳು ಮಂತ್ರಿಗಳೂ ಒಂದೇ ಕಡೆ ಹೋಗಿದ್ದಾರೆಯೇ ?

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಮಾನ್ಯ ಖರ್ಗೆಯವರ ಕಪ್ಪ ಏನೆಂದು ಗೊತ್ತಾಗಲಿಲ್ಲ. ನಮ್ಮನ್ನು ಏನೆಂದು ತಿಳಿದುಕೊಂಡಿದ್ದೀರಿ.

(ಗೊಂದಲ)

ಶ್ರೀ ಆರ್. ವೆಂಕಟರಾವಪ್ಪ.—ಕಡೆಯ ದಿವಸ ನಾವು, ನೀವೂ ಎಲ್ಲಾ ಇದ್ದು ಸಂತೋಷದಿಂದ ಹೊಗಬುವುದು ಬಿಟ್ಟು ಏನು ಇದು.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಆ ಸದನ ಕೂಡ ನಡೆಯಂತ್ತಿತ್ತೆ.

ಶ್ರೀ ಧರ್ಮಸಿಂಗ್.—ಎಲ್ಲಾ ಪೂಜೆಗೆ ಹೋಗಿದ್ದಾರೆಯೇ ?

ಅಧ್ಯಕ್ಷರು.—ರೂಲ್ಸ್ ಪ್ರಕಾರ ೫–೧೦ ಪಿಸಿಳಿರ ಸೂಚನೆಗಳನ್ನು ಇಡಬೇಕು ತಮ್ಮ ಅನುಕೂಲ ತೆಗೋಸ್ಕರ ಇಂದು ೩೮ ಸೂಚನೆಗಳನ್ನು ಇಟ್ಟಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಸೂಚನೆಗಳನ್ನು ಕೊಡುವುದರಿಂದ ಉತ್ತರ ಸಿಗಬೇಕು, ಸದನದ ಗಮನಕ್ಕೆ ಬರಬೇಕು ಎಂಬ ದೃಷ್ಟಿಯಿಂದ ಕೇಳುತ್ತೇವೆ. ಉತ್ತರ ಸಿಗಲಿಲ್ಲವೆಂದರೆ ೧೦೦ ಸೂಚನೆಗಳನ್ನು ಇಟ್ಟರೂ ಏನು ಲಾಭ ? ಏನಾದರೂ ಕಾರ್ಯಕ್ರಮವಾಗಲಿಲ್ಲವೆಂದರೆ, what is the use. ಜನರಿಗೆ ಪ್ರಯೋಜನವಾಗಬೇಕೆಂಬ ದೃಷ್ಟಿಯಿಂದ ನಾವು ಸೂಚನೆಯನ್ನು ಕೊಡುವುದು.

ಶ್ರೀ ಧರ್ಮಸಿಂಗ್.—ಇದು ಪೊಡಲನೇ ಸಲ ಅಲ್ಲ.

ಅಧ್ಯಕ್ಷರು.—ತಾವು ಕುಳಿತುಕೊಳ್ಳುತ್ತೀರೋ ಇಲ್ಲವೋ, ನಾನು ಎದ್ದು ನಿಂತಾಗ ತಾವು ಕೂಡ ಬೇಕು. ಸ್ವಲ್ಪ ರೂಲ್ಸ್ ರೆಗ್ಯುಲೇಷನ್ಸ್ ನೋಡಿ.

ಶ್ರೀ ಧರ್ಮಸಿಂಗ್.—ತಪ್ಪು ಅಪ್ಪಣೆಯನ್ನು ನಾವು ಪಾಲಿಸುತ್ತೇವೆ. ಸರಕಾರದ ಕಡೆಯಿಂದ ಸಮಂಗೆ ನೇರವಾದ ಉತ್ತರ ಬರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೊನೆಯ ದಿವಸ ಜಗಳ ಮಾಡಿಕೊಂಡು ಹೋಗುವುದು ಸರಿಯಲ್ಲ. ತಾವು ಏಕೆ ಅವರ ಕಿವಿ ಹಿಂಡಿಯಬಾರದು. ನಿನ್ನೆ ಏನೋ ನ್ಯಾಷನಲ್ ಇಂಟಿಗ್ರೇಷನ್ ದಿವಸವಿರುವುದರಿಂದ ಹೋಗಿದ್ದರು ಎಂದು ಒಪ್ಪಿಕೊಂಡಿದ್ದೇನೆ. ಇವತ್ತು ಯಾವ ಕೆಲಸವಿದೆ ? ಮಾನ್ಯ ಮುಖ್ಯಮಂತ್ರಿಗಳು ಒಬ್ಬರೇ ಹೋಗಿದ್ದಾರೆ. ರೆವಿನ್ಯೂ, ಹೋಮ್, ಮಿನಿಸ್ಟರ್ ಎಲ್ಲಿ.

ಅಧ್ಯಕ್ಷರು.—ತಾವು ಓದಿ ಹೇಳದಿದ್ದರೆ, ನಾನು ಮಂತ್ರಿಯೊಬ್ಬರನ್ನು ಕರೆಯಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ಸದನದಲ್ಲೂ ಇಲ್ಲ, ಈ ಸದನದಲ್ಲೂ ಇಲ್ಲ. ಎಲ್ಲಿ ಹೋದರು ?

ಅಧ್ಯಕ್ಷರು.—ನಿಮ್ಮ ಪಾತ್ರ ಚೆನ್ನಾಗಿ ಮಾಡುತ್ತೀರಿ. ಎಲ್ಲದಕ್ಕೂ ಒಂದು ಮಿತಿ ಇದೆ. ಮಾನ್ಯ ರತ್ನಾಕರ್‌ರವರೇ ತಾವು ಓದುತ್ತಿರೋ ಇಲ್ಲವೋ ? ಈ ಸಭೆ ನಡೆಸುವುದಕ್ಕೆ ನಾವು ಅಡ್ಡಿ ಬಂದರೆ ಅದು ಸರಿಯಲ್ಲವೆಂದು ಹೇಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಮಾಡುವುದು ಸರಿಯೇ ? ಅವರು ಅಬ್ಸೆಂಟ್ ಇರುವುದು ಸರಿಯೇ, ತಾವು ಅವರ ಕಿವಿ ಹಿಂಡಿ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಖಿರ್ಗೆಯವರೂ ಮಂತ್ರಿಗಳಾಗಿದ್ದವರು. ಬಹಳ ಅನುಭವಸ್ಥರು.

ಅಧ್ಯಕ್ಷರು.—ಮಾನ್ಯ ರತ್ನಾಕರ್‌ರವರೇ ತಾವು ಓದುತ್ತೀರೋ ಇಲ್ಲವೊ.

ಶ್ರೀ ಧರ್ಮಸಿಂಗ್.—ಇಲ್ಲಿ. ಯಾರೂ ಮಂತ್ರಿಗಳಿದ್ದಾರೆ, ಅವರ ವಿಷಯದ ಬಗ್ಗೆ ನಿಯಮ ೩೩ಳಿರ ಕೆಳಗೆ ಎತ್ತುವುದಕ್ಕೆ ಅಲೋ ಮಾಡಿ.

ಅಧ್ಯಕ್ಷರು.—ಅವರಿಗೆ ಓದುವುದಕ್ಕೆ ಅವಕಾಶ ಕೊಡುತ್ತಿರೋ ಇಲ್ಲವೋ ?

SRI M. MALLIKARJUNA KHARGE.—Why the Ministers are absent ? What is the reason ? What is the urgent business they have got ? Have they given in writing to you about their absence, authorising some other Ministers to answer on behalf of them? ತಾವು ನಮಗೆ ಸಮಾಧಾನ ಮಾಡುತ್ತೀರೋ ಹೊರತಾಗಿ ಅವರ ಕಿವಿ ಹಿಂಡುವುದಕ್ಕೆ ತಯಾರಿಲ್ಲ. ನಮಗೆ ಮಾತ್ರ ಹೇಳುತ್ತಿದ್ದೀರಿ. We have given the Notices in writing and they should have been present here.

ಅಧ್ಯಕ್ಷರು.—ನೀವು ಓದಿ. ಮಾನ್ಯ ಮಂತ್ರಿಗಳ ಕಡೆಯಿಂದ ಕೆಲಸ ಮಾಡಿಸಿಕೊಳ್ಳುವುದು ಬೇಕಾಗಿಲ್ಲವೇ ?

(INTERRUPTION)

ಶ್ರೀ ಜಿ. ನಾರಾಯಣಕುಮಾರ್.—ಹಂಡುಗರಂ ಎಲ್ಲಾ ಸಂಮ್ಮನಿದ್ದಾಗೆ. ದೊಡ್ಡವರು ಏಕೆ ಕೂಗಾಡುವುದು.

ಅಧ್ಯಕ್ಷರು.—ನೀವು ಓದಿ.

VI. ಮಲೆನಾಡಿನಲ್ಲಿ ಉರುವಲು ಕಟ್ಟಿಗೆಯನ್ನು ಬಗೆಹರಿಸಲು ಅಸ್ಸ್ರ ಒಲೆಯನ್ನು ಸಬ್ಸಿಡಿ ದರದಲ್ಲಿ ಕೊಡುವುದು

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ಮಲೆನಾಡಿನಲ್ಲಿ ಉರುವಲು ಕಟ್ಟಿಗೆ ಸಮಸ್ಯೆ ಬೆಚ್ಚಿದ್ದು, ಬಗಡಾಯಿಸಿರುವ ಈ ಸಮಸ್ಯೆಯನ್ನು ಕಡಿಮೆಗೊಳಿಸಲು ಸರಕಾರ ಸಬ್ಸಿಡಿ ದರದಲ್ಲಿ ಅಸ್ಸ್ರ ಒಲೆಯನ್ನು ಕೊಡುವುದು ಹಾಗೂ ಈ ಬಗ್ಗೆ ಗ್ರಾಮೀಣ ಜನರಲ್ಲಿ ತಿಳುವಳಿಕೆ ಮೂಡಿಸುವುದು ಅಗತ್ಯ. ಅಲ್ಲದೆ ಶಿವಮೊಗ್ಗ ಜಿಲ್ಲೆಯ ಗಾಜನೂರಿನಲ್ಲಿ ಸಾಮೂಹಿಕ ಗೋಬರ್ ಗ್ಯಾಸನ್ನು ಸ್ಥಾಪಿಸಿದಂತೆ ಹರಿಜನ ಕಾಲೋನಿ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸ್ಥಾಪಿಸಿ ಬರೆ ಸಮಸ್ಯೆ ಬಗೆಹರಿದೀತು. ಆದುದರಿಂದ ಸರಕಾರ ಈ ಬಗ್ಗೆ ಸೂಕ್ತ ಗಮನ ಹರಿಸಿ ನಿರ್ಧಾರ ತೆಗೆದುಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಯಾವುದೇ ಒಂದು ಯೋಜನೆಯನ್ನು ಇಟ್ಟುಕೊಳ್ಳದೇ ಕಾಡನ್ನು ಕಡಿದು ಸಾಳು ಮಾಡಿದ್ದೇವೆ ಈಗ ಮಳೆ ಬರುತ್ತಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಕ್ಷಾಮವನ್ನು ನಾವು ಅನುಭವಿಸುತ್ತಿದ್ದೇವೆ. ೪೦-೫೦ ವರ್ಷಗಳಿಂದ ಮಾಡಿದ ಪಾಪವನ್ನು ನಾವು ಅನುಭವಿಸುತ್ತಿದ್ದೇವೆ. ಇದರಿಂದಾಗಿ ಅನಾವಶ್ಯಕವಾಗಿ ಸೌದೆಯನ್ನು ಕಡಿದು ಕಾಡನ್ನು ಹಾಳು ಮಾಡುವುದು ಬೇಡವೆಂದು ಸರಕಾರ ಕಾನೂನು ಮಾಡಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅಸ್ಸ್ರ ಒಲೆ. ಗೋಬರ್ ಗ್ಯಾಸ್ ಒಲೆಗಳ ಬಳಕೆಯನ್ನು ಮಾಡಬೇಕಾಗುತ್ತದೆ. ಈಗಾಗಲೇ ಮಾಡುತ್ತಿದ್ದೇವೆ. ಇನ್ನೂ ಹೆಚ್ಚಿಗೆ ಹಣವನ್ನು ಒದಗಿಸಿ ಇದನ್ನು ಹೆಚ್ಚು ಅಭಿವೃದ್ಧಿಗೊಳಿಸುವುದಕ್ಕೆ ಪ್ರಯತ್ನ ಪಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ವಿಧಾನಸಭೆಯ ಅಧಿವೇಶನ ಪ್ರಾರಂಭವಾದಮೇಲೆ ನಾನು ಸುಮಾರು ೮-೧೦ ನೋಟೀಸ್ ನಿಯಮ ೩೩ಳಿರ ಪ್ರಕಾರ ಕಳುಹಿಸಿಕೊಟ್ಟಿದೆ . ಅವುಗಳಿಗೆ ಒಂದಕ್ಕೂ ಉತ್ತರ ಬರದೇ ಇರುವುದರಿಂದ ಅದಕ್ಕೆ ಪ್ರತಿಭಟಿಸಿ ನಾನು ಇದನ್ನು ಓದದೆ ಸುಮ್ಮನೆ ಕಂಳಿತುಕೊಳ್ಳುತ್ತೇನೆ.